# ತಿಮ್ಮನ ಜೋಳಿಗೆ

## 1

ಒಂದು ರಾತ್ರಿ ಏನಾಯಿತು, ಗೊತ್ತೇ
ನಮ್ಮ ತಿಮ್ಮನಿಗೆ ತುಂಬ ಚಳಿ!
ಮಲಗಲು ಹಾಸಿಗೆ, ಹೊದೆಯಲು ಕಂಬಳಿ
ಏನೂ ಇಲ್ಲ ಅವನ ಬಳಿ.

ಬೆಂಕಿಯನಾದರು ಉರಿಸೋಣೆಂದರೆ
ಒಲೆಯೊಳಗಿಲ್ಲ ಒಂದು ಕಿಡಿ
ಮುದುಡೀ, ಮುರುಟೀ ತಿಮ್ಮನ ದೇಹ
ಆಯಿತು ಪಾಪ, ಒಂದು ಹಿಡಿ!

ಬಾನಿನ ಬೀದಿಗೆ ಬಂದಿಳಿದಿತ್ತು
ಥಳಥಳ ಬೆಳುದಿಂಗಳ ತೇರು!
ಚಂದಿರ ನೋಡಿದ ತಿಮ್ಮನ ಪಾಡು
ಅವನಿಗೆ ಬಂತು ಕಣ್ಣೀರು!

ಬೆಳ್ಳಿ ಮೋಡದ ರಸ್ತೆಯ ಮೇಲೆ
ಚಂದ್ರ ಬಂದ ತಿಮ್ಮನ ಮನೆಗೆ
ಮನೆಯೆಂದೆನೆ? ಛೇ, ಮಣ್ಣಿನ ಜೋಪಡಿ
ಹುಲ್ಲೂ ಇಲ್ಲ ಛಾವಣಿಗೆ.

ಮಂಜನು ಹಿಂಜಿ, ದಾರವ ತೆಗೆದು
ಮಾಡಿದ ಬಿಳಿ ಜೋಳಿಗೆ ತೋರಿ
ಚಂದಿರ ಹೇಳಿದ ತಿಮ್ಮನ ಕರೆದು
'ಇಕೊ ಈ ಜೋಳಿಗೆ, ತಿಮ್ಮ ಮರೀ;

ಜೋಳಿಗೆ ಪೂಜಿಸಿ – ಏನನ್ನಾದರು –
ದಿನಕ್ಕೆ ಒಂದೇ ವರ ಕೋರು
ದಿನಕ್ಕೆ ಒಂದೇ, ಹೆಚ್ಚಿಗೆ ಕೂಡದು
ನೆನಪಿಡು, ಎಚ್ಚರ, ಹುಷಾರು!'

